ಕರ್ನಾಟಕ ವಿಧಾನ ಸಭೆ

5143 (4952); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ರಾಜ್ಯದಲ್ಲಿ ಬುದ್ಧಿಮಾಂದ್ಯ ಮಕ್ಕಳ ಗಣತಿಯನ್ನು ಸರ್ಕಾರ ನಡೆಸಿದೆಯೇ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು);

ಆ) ಬುದ್ಧಿಮಾಂದ್ಯ ಮಕ್ಕಳ ಕಲ್ಯಾಣಕ್ಕೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು; (ಸೌಲಭ್ಯಗಳ ಬಗ್ಗೆ ವಿವರವಾದ ಮಾಹಿತಿ ನೀಡುವುದು);

ಇ) ಹಾಗಿದ್ದಲ್ಲಿ, ಬುದ್ಧಿಮಾಂದ್ಯ ಮಕ್ಕಳಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸುವಲ್ಲಿ ಸರ್ಕಾರದ ಮುಂದಿರುವ ಯೋಜನೆಗಳೇನು; (ವಿವರವಾದ ಮಾಹಿತಿ ನೀಡುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು)

ಅ) ಹೌದು.

ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ ಒಟ್ಟು 93,974 ರಷ್ಟು ಬುದ್ಧಿಮಾಂದ್ಯರಿದ್ದು, ಇದರಲ್ಲಿ 37,691 ಬುದ್ಧಿಮಾಂದ್ಯ ಮಕ್ಕಳಿರುತ್ತಾರೆ. ಜಿಲ್ಲಾವಾರು ವಿವರವನ್ನು ಅನುಬಂಧ–01 ರಲ್ಲಿ ಲಗತ್ತಿಸಿದೆ.

ಆ) ಬುದ್ಧಿಮಾಂದ್ಯ ಮಕ್ಕಳ ಕಲ್ಯಾಣಕ್ಕೆ ಕೈಗೊಂಡ ಕಾರ್ಯಕ್ರಮಗಳ ಮಾಹಿತಿಯನ್ನು ಅನುಬಂಧ–02ರಲ್ಲಿ ಲಗತ್ತಿಸಿದೆ.

ಇ) ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ಯೋಜನೆಗಳನ್ನು ರೂಪಿಸಲಾಗುವುದು.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಧು ಬಂಗಾರಪ್ಪ ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:4952ಕ್ಕೆ ಅನುಬಂಧ-01

ಬುದ್ಧಿಮಾಂದ್ಯ ಮಕ್ಕಳ ಜಿಲ್ಲಾವಾರು ವಿವರ

SL NO	DISTRICT	AGE 0-4	AGE 5-9	AGE 10-19	TOTAL (AGE 0-19)
1	BANGALORE URBAN	848	1200	3022	5070
2	BANGALORE RURAL	30	109	392	531
3	BELLARY	179	458	1153	1790
4	BELGAUM	278	757	2349	3384
5	BIDAR	84	274	750	1108
6	BAGALKOT	119	376	1048	1543
7	BIJAPUR	155	360	985	1500
8	CHAMARAJNAGAR	40	115	373	528
9	CHIKBALLAPUR	74	207	635	916
10	CHIKMANGALURU	28	118	424	570
11	CHITRADURGA	79	221	712	1012
12	DAKSHIN KANNADA	46	201	782	1029
13	DAVANGERE	111	289	914	1314
14	DHARWAD	96	268	828	1192
15	GADAG	66	226	663	955
16	GULBARGA	236	477	1239	1952
17	HASSAN	66	169	586	821
18	HAVERI	70	330	1115	1515
19	KODAGU	12	62	235	309
20	KOLAR	68	211	634	913
21	KOPPAL	70	267	368	705
22	MANDYA	62	234	713	1009
23	MYSORE	111	306	997	1414
24	RAICHUR	137	321	867	1325
25	RAMANAGAR	22	104	370	496
26	SHIMOGA	72	244	770	1086
27	TUMKURU	83	281	1001	1365
28	UDUPI	21	106	530	657
29	UTTAR KANNADA	34	185	607	826
30	YADGIRI	79	226	551	856
				TOTAL	37691

ಅನುಬಂಧ–02

ಸರ್ಕಾರವು ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಪುನರ್ವಸತಿಗಾಗಿ ಪ್ರಮುಖವಾದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

- ಬುದ್ಧಿಮಾಂದ್ಯರ ಹಕ್ಕುಗಳ ಸಂರಕ್ಷಣೆ, ಪೂರ್ಣ ಭಾಗವಹಿಸುವಿಕೆ ಮತ್ತು ಪುನರ್ವಸತಿಗಾಗಿ ಅಂಗವಿಕಲ ವ್ಯಕ್ತಿಗಳ ಅಧಿನಿಯಮ, ನ್ಯಾಷನಲ್ ಟ್ರಸ್ಟ್ ಕಾಯಿದೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಬುದ್ಧಿಮಾಂದ್ಯ ಮಕ್ಕಳಿಗಾಗಿ ಸರ್ಕಾರದ ಅನುದಾನಡಿ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ನಿರ್ವಹಿಸಲಾಗುತ್ತಿರುವ ಒಟ್ಟು 63 ವಿಶೇಷ ಶಾಲೆಗಳಲ್ಲಿ 4305 ಮಕ್ಕಳು ಕಲಿಯುತ್ತಿದ್ದು, ಇವರಿಗೆ ಉಚಿತ ಶಿಕ್ಷಣ, ವಸತಿ ಸೌಕರ್ಯ, ಆರೋಗ್ಯ ಸಂರಕ್ಷಣೆ, ಸಮವಸ್ತ್ರ ಮತ್ತು ಸಂಚಾರಿ ಭತ್ಯೆಗಳನ್ನು ಒದಗಿಸಲಾಗುತ್ತಿದೆ.

- ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರು ಪೋಷಕರಿಗೆ ರೂ.20,000/–ವರೆಗೆ ವಿಮಾಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಸದರಿ ಯೋಜನೆಯಡಿಯಲ್ಲಿ ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ ತಾಯಿ/ಪೋಷಕರು ಮೃತರಾದಲ್ಲಿ ನಾಮನಿರ್ದೇಶಿತರಾದವರಿಗೆ ರೂ.20,000/– ಧನ ಸಹಾಯ ನೀಡಲಾಗುವುದು.

- ಶಾಲೆಗಳಲ್ಲಿ ಕಲಿಯುತ್ತಿರುವ ಬುದ್ಧಿಮಾಂದ್ಯ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ ಹಾಗೂ ಅವಶ್ಯಕತ ಸಾಧನ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

- ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಈ ಎಲ್ಲಾ ವರ್ಗದವರಿಗೆ ಅವಶ್ಯವಾದ ಸೇವಾ ಸೌಲಭ್ಯಗಳನ್ನು ಅವರ ಮನೆಬಾಗಿಲಿಗೆ ಒದಗಿಸಲು ಅವಕಾಶ ಮಾಡಕೊಡಲಾಗಿದೆ.